ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ- **01** / ಪಿ.ಡಬ್ಲ್ಯೂ- **01**

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **16-12-2024** ರಂದು ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಬಸವರಾಜ |
| ತಂದೆಯ ಹೆಸರು - | ಹನುಮಂತಪ್ಪ |
| ವಯಸ್ಸು - | 37 ವರ್ಷಗಳು |
| ಉದ್ಯೋಗ - | ಚಾಲಕ |
| ವಾಸಸ್ಥಳ - | ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಮೃತ ದುರ್ಗೇಶ, ಚಾಸಾ 2 ನನಗೆ ಪರಿಚಯ. ದಿಃ **15.08.2023** ರಂದು ಬೆಳ್ಳಿಗ್ಗೆ **11.30** ಗಂಟೆಗೆ ದುರ್ಗೇಶ ಮತ್ತು ಚಾಸಾ 2 ರವರು ಬೈಕ್ ನಲ್ಲಿ ಗುಂಡಾ ಫಾರೇಸ್ಟ್ ಗೆ ಹೋಗಿ ಬರುತ್ತಿದ್ದರು. ಆಗ ಒಮ್ಮೇಲೆ ಒಂದು ಕಾರ್ ಬ್ರೇಕ್ ಹಾಕಿದ್ದರಿಂದ ದುರ್ಗೇಶ ಮತ್ತು ಚಾಸಾ 2 ರವರ ಬೈಕ್ ಸದರಿ ಕಾರ್ ಗೆ ಡಿಕ್ಕಿ ಹೊಡೆದು ಅಪಘಾತ ಆಗಿರುತ್ತದೆ ಎಂದು ದಾರಿಯಲ್ಲಿ ಹೋಗುತ್ತಿದ್ದ ಜನರು ಚಾಸಾ 13 ರವರಿಗೆ ತಿಳಿಸಿದರು. ನಂತರ ಚಾಸಾ 13 ರವರು ನನಗೆ ತಿಳಿಸಿದರು. ನಂತರ ನಾನು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ದುರ್ಗೇಶ ಮತ್ತು ಚಾಸಾ 2 ರವರು ಗಾಯಗೊಂಡಿದ್ದರು. ಅಲ್ಲಿ ಕಾರ್ ಇರಲಿಲ್ಲ. ದುರ್ಗೇಶನ ಎಡಗಾಲಿನ ಮೂಳೆ ಮುರಿದಿತ್ತು ಮತ್ತು ಅತನ ಮರ್ಮಾಂಗಕ್ಕೆ ಹೆಟ್ಟು ಬಿದ್ದತ್ತು. ಚಾಸಾ 2ರವರ ಕೈಗೆ ಮತ್ತು ಮುಖಕ್ಕೆ ಪೆಟ್ಟು ಬಿದ್ದಿತ್ತು. ನಂತರ ಗಾಯಾಳುಗಳನ್ನು ಚಾಸಾ 13 ಮತ್ತು 14 ರವರು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳಿಯ ಕಿಮ್ಸ್ ಆಸ್ಪತ್ರೆಗೆ ಕಳುಹಿಸಿದರು. ದಿಃ **16.08.2023** ರಂದು ರಾತ್ರಿ **9.30** ಗಂಟೆಗೆ ದುರ್ಗೇಶ ಮರಣ ಹೊಂದಿದ್ದರು. ನಂತರ ನಾನು ದೂರು ದಾಖಲು ಮಾಡಿದೆನು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯ ನಿಪಿ 1 ಎ ಎಂದು ಗುರುತಿಸಲಾಯಿತು. ನಂತರ ಅಪಘಾತ ಸ್ಥಳಕ್ಕೆ ಪೋಲಿಸರು ಕರೆದುಕೊಂಡು ಹೋಗಿ ದಿಃ **18.08.2023** ರಂದು ವಿಚಾರಣೆ ಮಾಡಿದರು. ಅಲ್ಲಿ ನನ್ನ ಸಹಿ ಪಡೆದರು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ, ಪಂಚನಾಮೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು

ಗುರುತಿಸಲಾಯಿತು. ಆಗ ಸ್ಥಳದಲ್ಲಿ ಚಾಸಾ 13 ಮತ್ತು ಅವರ ಸ್ನೇಹಿತರು ಇದ್ದರು. ಘಟನಾ ಸ್ಥಳದಲ್ಲಿ ಫೋಟೊ ತೆಗೆದರು. ಸಾಕ್ಷಿ ಗುರುತಿಸಿದ ಫೋಟೊಗಳನ್ನು ನಿಪಿ 3 ರಿಂದ 5 ಎಂದು ಗುರುತಿಸಲಾಯಿತು. ನಂತರ ಪೋಲಿಸ ಠಾಣೆಗೆ ಹೋದೆವು. ಅಲ್ಲಿ ಚಾಸಾ 2 ರವರು ಹೋಗುತ್ತಿದ್ದ ಬೈಕ್ ಇತ್ತು. ಅಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಜಪ್ತು ಪಂಚನಾಮೆಯನ್ನು ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಅಲ್ಲಿ ಫೋಟೊ ತೆಗೆದರು. ಸಾಕ್ಷಿ ಗುರುತಿಸಿದ ಫೋಟೊವನ್ನು ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು. ಅಲ್ಲಿ ವಾಹನಗಳನ್ನು ಜಪ್ತು ಮಾಡಿದರು. ಕಾರ್ ಚಾಲಕನು ಏಕಾಏಕಿ ಬ್ರೆಕ್ ಹಾಕಿದ್ದರಿಂದ ಹಿಂದಿನಿಂದ ದುರ್ಗೇಶ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಕಾರಿಗೆ ಡಿಕ್ಕಿ ಆಗಿರುತ್ತದೆ ಎಂದು ಗೊತ್ತಾಯಿತು. ಆ ಎರಡು ವಾಹನಗಳ ನಡುವೆ ಅಂತರ ಇರಲಿಲ್ಲ ಎಂದು ಗೊತ್ತಾಯಿತು. ನಂತರ ಪೋಲಿಸರು ಕರೆದು ಕಾರ್ ಚಾಲಕನ ಹೆಸರು ರಾಮದೇವ ಎಂದು ತಿಳಿಸಿದರು. ಅಪಘಾತವು ಕಾರ್ ಚಾಲಕ ಹಾಗೂ ದುರ್ಗೇಶ ಇಬ್ಬರ ತಪ್ಪಿನಿಂದ ಆಗಿರುತ್ತದೆ ಎಂದು ತಿಳಿಸಿದರು. ಕಾರ್ ಚಾಲಕನನ್ನು ನಾನು ನೋಡಿರುವುದಿಲ್ಲ.

<u>ಪಾಟೀಸವಾಲು- ಆರೋಪಿತರ ಪರ ವಕೀಲರಿಂದ-</u>

ದುರ್ಗೇಶ ಬಳಿ ವಾಹನ ಚಾಲನಾ ಪರವಾನಿಗಿ ಇರಲಿಲ್ಲ. ಆತ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನವನ್ನು 10 ವರ್ಷಗಳ ಹಿಂದೆ ಬ್ಯಾನ್ ಮಾಡಿದ್ದರು ಎಂದರೆ ಸರಿ. ಆತ ಸದರಿ ವಾಹನವನ್ನು ರಿಪೇರಿ ಮಾಡಿಸಿ ಒಂದು ದಿನ ಆಗಿತ್ತು ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಮೂರು ರಸ್ತೆ ಇವೆ ಎಂದರೆ ಸರಿ. ಅದು ರಾಷ್ಟ್ರಿಯ ಹೆದ್ದಾರಿ ಎಂದರೆ ಸರಿ. ಅರ್ ಟಿ ಓ ಚೆಕ್ ಪೋಸ್ಟ ಬಳಿ ಎರಡು ರಸ್ತೆ ಸೇರುತ್ತವೆ ಎಂದರೆ ಸರಿ. ಆ ಸ್ಥಳದಲ್ಲಿ ವಾಹನಗಳು ನಿಧಾನವಾಗಿ ಚಲಿಸಬೇಕು ಎಂದರೆ ಸರಿ. 2 ನೇ ಆರೋಪಿಯ ಕಾರ್ ನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪೋಲಿಸ್ ಠಾಣೆಯಲ್ಲಿ ನೋಡಿರುವುದಾಗಿ ಹೇಳುತ್ತಾರೆ.

2. ದುರ್ಗೇಶ ಮತ್ತು ಚಾಸಾ 2 ತಮ್ಮ ಬೈಕ್ ನ್ನು ವಿಲಿಂಗ್ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ದುರ್ಗೇಶ ರವರ ವಾಹನವು ಮುಂದಿನ ಭಾಗದಲ್ಲಿ ಮಾತ್ರ ಜಕಂ ಆಗಿದೆ ಎಂದರೆ ಸರಿ. 2 ನೇ ಆರೋಪಿಯ ಕಾರಿನ ಹಿಂಬದಿಯ ಗ್ಲಾಸ್ ಹೊಡೆದಿತ್ತು ಎಂದರೆ ಸರಿ. ದುರ್ಗೇಶ ವಿಲಿಂಗ್ ಮಾಡಿಕೊಂಡು ಹೋಗಿ 2 ನೇ ಆರೋಪಿಯ ಕಾರ್ ಗೆ ಡಿಕ್ಕಿ ಪಡೆಸಿರುತ್ತಾನೆ ಎಂದರೆ ಸರಿಯಲ್ಲ. ದುರ್ಗೇಶ ತಪ್ಪಿನಿಂದ ಅಪಘಾತ ಆಗಿದೆ ಎಂದು ನಾನು ದೂರು ನೀಡಿದ್ದೆ ಎಂದರೆ ಸರಿ. ನಂತರ ಪರಿಹಾರ ಪಡೆಯಲು ನಾನು 2 ನೇ ಆರೋಪಿಯ ವಿರುದ್ಧ ಸುಳ್ಳು ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ದುರ್ಗೇಶ ನ ತಪ್ಪಿನಿಂದ ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ.

3. ಪೋಲಿಸ ಠಾಣೆಗೆ ಹೋದಾಗ ನಾನು ಎಷ್ಟು ಸಹಿ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. 7-8 ಸಹಿ ಮಾಡಿರಬಹುದು. ಸಾಕ್ಷಿಗೆ ನಿಪಿ 2 ಮತ್ತು 6 ತೋರಿಸುತ್ತಿದ್ದು ಅವುಗಳಲ್ಲಿ ಸಹಿಯನ್ನು ತಾನು ಪೋಲಿಸ ಠಾಣೆಯಲ್ಲಿ ಮಾಡಿದ್ದು ಎಂಬ ಸೂಚನೆಯನ್ನು ಒಪ್ಪಿಕೊಂಡಿರುತ್ತಾರೆ. ಯಾವ ಮೊಬೈಲ್ ನಿಂದ ಫೋಟೊ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಫೋಟೊ ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿಃ 18.08.2023 ರ ನಂತರ ನಾನು ಪೋಲಿಸ ಠಾಣೆಗೆ ಹೋಗಿಲ್ಲ ಎಂದರೆ ಸರಿ. ದೂರು ಹೊರತುಪಡಿಸಿ ಬೇರೆ ಯಾವುದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವು 2 ನೇ ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲಿಂಗ್ ಮಾಡಿ ಆಗಿರುವ ಅಪಘಾತಕ್ಕೆ ಪರಿಹಾರ ಸಿಗುವುದಿಲ್ಲ ಎಂದು ಪೋಲಿಸರು ಹೇಳಿದ ಕಾರಣಕ್ಕೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- **01** / ಪಿ.ಡಬ್ಲ್ಯೂ.- **01**

**4.** ಅಪಘಾತ ಸ್ಥಳದ ಬಳಿ ಸಾರಿಗೆ ಇಲಾಖೆಯವರು ಇರುತ್ತಾರೆ ಎಂದರೆ ಸರಿ. **2** ನೇ ಆರೋಪಿಯ ವಾಹನ ನಿಧಾನವಾಗಿ ಚಲಾಯಿಸುತ್ತಿತ್ತು ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.